**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.04.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ**

. ಪೊಲೀಸರು ಹೇಳಿಕೆ ಕೊಡಲು ಬರುವಂತೆ ನನಗೆ ನೋಟಿಸ್ ಕೊಟ್ಟಿದ್ದರು. ದಿಃ*17.03.2023* ರಂದೇ ಆ ನೋಟಿಸ್ ಕೊಟ್ಟಿದ್ದರು. ಮಹಜರ್ ಕಾಲಕ್ಕೆ ನನ್ನನ್ನು ಕರೆದಿಲ್ಲ. ಘಟನೆ ಆಗಿ ಎರಡು ದಿನ ಬಳಿಕ ನಾನು ಪೋಲೀಸ್ ಠಾಣೆಗೆ ಹೋಗಿದ್ದೆ. ಆ ಕಾಲಕ್ಕೆ ಪೊಲೀಸರು ಫೋನ್ ಮಾಡಿದಾಗ ನಾನು ಪೋಲೀಸ್ ಠಾಣೆಗೆ ಹೋಗಿದ್ದೆ. ಆ ಘಟನೆಗಿಂತ ಮೊದಲು ಪೊಲೀಸರಿಗೆ ನನ್ನ ಪರಿಚಯ ಇರಲಿಲ್ಲ. ಘಟನೆ ನಡೆದು *2* ದಿನಗಳವರೆಗೆ ನಾನು ಠಾಣೆಗೆ ಹೋಗಿರಲಿಲ್ಲ. ದೂರು ಕೊಡಲು ಹೋದಾಗ ಪೊಲೀಸರಿಗೆ ನನ್ನ ನಂಬರ್ ಅನ್ನು ಕೊಟ್ಟಿರಬಹುದು. ಚಂದನ್, ಚೇತನ್, ನಾನು, ಅಮೃತ್, ದೊರೆಸ್ವಾಮಿ ಸ್ನೇಹಿತರು ಎಂದರೆ ನಿಜ. ನನ್ನ ಮನೆಯಿಂದ ದೂರುದಾರರ ಮನೆ *100–150* ಮೀ ದೂರದಲ್ಲಿದೆ. ಘಟನೆ ದಿನ ನಾನು ಕೆಲಸ ಮುಗಿಸಿಕೊಂಡು ಬಂದಿದ್ದೆ. ನಾನು ಡ್ರೈವರ್ ಕೆಲಸ ಮಾಡುತ್ತೇನೆ. ಗೌತಮ್ ಮತ್ತು ದೊರೆಸ್ವಾಮಿ ಡ್ರೈವರ್ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಸ್ವಂತ ವಾಹನ ಓಡಿಸುತ್ತೇನೆ. ಆ ದಿನ ನಾನು ಎಲ್ಲಿ ಕೆಲಸಕ್ಕೆ ಹೋಗಿದ್ದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನನ್ನ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನಾನು ಓದಿಲ್ಲ. ಘಟನೆ ದಿನ ರಾತ್ರಿ*8.30–8.45* ರ ವೇಳೆಗೆ ನಾನು ಅಂಗಡಿ ಬಳಿ ಹೋಗಿದ್ದೆ. ಆ ಕಾಲಕ್ಕೆ ನಾನು ಸಿಗರೇಟ್ ತರಲು ಹೊಗಿದ್ದೆ. ನಾನು ಅಂಗಡಿಯಲ್ಲಿ ಖರೀದಿ ಮಾಡುವಾಗಲೇ ಆರೋಪಿ ಓಡಿಹೋಗುತ್ತಿದ್ದ. ಆ ಕಾಲಕ್ಕೆ ನಾನು *3–4* ನಿಮಿಷ ಆರೋಪಿಯನ್ನು ಹಿಂಬಾಲಿಸಿಕೊಂಡು ಹೋಗಿದ್ದೆ. ನನ್ನ ಹೇಳಿಕೆಯಲ್ಲಿ

ಹಿಂಬಾಲಿಸಿಕೊಂಡು ಹೋದ ಸಮಯ ಹೇಳಿದ್ದೆ. ಆ ದಿನ ಎಷ್ಟು ಜನ ಹಿಂಬಾಲಿಸಿಕೊಂಡು ಹೋಗಿದ್ದೆವು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮುಖವನ್ನು ಮಾಡಿಕೊಂಡು ಹೋಗುತ್ತಿದ್ದ. ಮುಂದೆ ಓಡಿಹೋಗುವ ವ್ಯಕ್ತಿಯು ಹಿಂದೆ ಓಡಿಹೋಗುವವರಿಗೆ ಮುಖ ಕಾಣುವುದಿಲ್ಲ ಎಂದರೆ ನಿಜ. ಆ ದಿನ ಆರೋಪಿ ಪೂರ್ತಿ *3–4* ನಿಮಿಷ ನನ್ನ ಮಂದೆಯೇ ಓಡಿ ಹೋಗಿದ್ದ. ಆರೋಪಿ ನನ್ನ ಅಂಗಡಿ ಬಳಿ ನಿಂತಿದ್ದಾಗ ಓಡಿ ಬಂದು ಎಡಕ್ಕೆ ತಿರುಗಿ ಓಡಿದ್ದರಿಂದ ನಾನು ಅವರನ್ನು ನೋಡಿದ್ದೆ. ಆ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ. ಆರೋಪಿ ಓಡಿ ಹೋದ ಬಳಿಕ ಚೇತನ್ ಅಲ್ಲಿಗೆ ಬಂದಿದ್ದರು. ನಾನು *5* ನಿಮಿಷದ ವರೆಗೆ ಘಟನೆ ಸ್ಥಳದಲ್ಲಿ ಇದ್ದೆ. ಆರೋಪಿಗೂ ನನಗೂ *10* ಅಡಿ ಅಂತರ ಇತ್ತು. ಚಂದನ್ ಇವರ ಮನೆಯಿಂದ ಅಂಗಡಿ *50* ಮೀ ದೂರವಿದೆ. ಈ ಎಲ್ಲಾ ವಿಷಯದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಆ ದಿನ ಆರೋಪಿ ಧರಿಸಿದ್ದ ಬಟ್ಟೆ ಯಾವ ಬಣ್ಣದ್ದು ಎಂದು ನೋಡಿದ್ದೇನೆ. ಅದು ಹಸಿರು ಬಣ್ಣದ್ದು ಇತ್ತು. ಸಾಕ್ಷಿ ಹೇಳುವ ಮುಂಚೆ ನಾನು ಮತ್ತು ಚಂದನ್ ಮಾತನಾಡುತ್ತಿದ್ದೆವು ಎಂದರೆ ನಿಜ. ನಾನು ಪೊಲೀಸರ ಬಳಿ ಯಾವ ರೀತಿ ಸಾಕ್ಷಿ ಹೇಳಬೇಕು ಎಂದು ಚರ್ಚೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ಕೈಯಲ್ಲಿ ಚಾಕು ಇತ್ತು. ಚಾಕು ಮತ್ತು ಡ್ರ್ಯಾಗರ್ ಬೇರೆ ಬೇರೆ ಎಂದರೆ ನಿಜ. ಆ ದಿನ ಆರೋಪಿಯ ಕೈಯಲ್ಲಿದ್ದ ಚಾಕುವಿನ ಹಿಡಿ ನೋಡಿದ್ದೇನೆ. ಅದು ಕಬ್ಬಿಣದ್ದು ಇತ್ತು. ಕೈಯಲ್ಲಿ ಹಿಡಿದಿದ್ದರು ಸಹ ಆ ಹಿಡಿ ನನಗೆ ಕಾಣುತ್ತಿತ್ತು. ಆ ದಿನ ಚಂದನ್ ಕಪ್ಪು ಮತ್ತು ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದ ಮತ್ತು ಕ್ರೀಂ ಬಣ್ಣದ ಟಿ.ಶರ್ಟ್ ಧರಿಸಿದ್ದ. ಅದು ಪೂಮಾ ಕಂಪನಿಯ ಟಿ.ಶರ್ಟ್ ಇತ್ತು. ನನ್ನ ಹೇಳಿಕೆಯಲ್ಲಿ ಸಹ ಆ ಬಗ್ಗೆ ಹೇಳಿದ್ದೆ. ಆ ರೀತಿಯ ಟಿ.ಶರ್ಟ್ ಗಳು ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತವೆ ಎಂದರೆ

ನಿಜ. ಪಿರ್ಯಾದಿ ಚಂದನ್ ಸ್ನೇಹಿತನಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹೆಬ್ಬಾಳ್ ಗ್ರಾಮದ ವಾಸಿ ಇರುತ್ತಾನೆ. ಆರೋಪಿ ಬಗ್ಗೆ ನಾನು ಯಾವುದೇ ವಿವರಗಳನ್ನು ಪಡೆದುಕೊಂಡಿಲ್ಲ. ನಾನು ಪೊಲೀಸರ ಮುಂದೆ ಬೇರೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನಾನು ಆಸ್ಪತ್ರೆಗೆ ಸಹ ಹೋಗಿದ್ದೆ. ಅಂದಾಜು ರಾತ್ರಿ ***9.15*** ಕ್ಕೆ ಆಸ್ಪತ್ರೆಗೆ ಹೋಗಿದ್ದೆವು. ಆ ಕಾಲಕ್ಕೆ ಆಸ್ಪತ್ರೆಯಲ್ಲಿ ನಾನು ಸಹಿ ಮಾಡಿಲ್ಲ. ಆಸ್ಪತ್ರೆಗೆ ಅಂದಾಜು ***4*** ಜನ ಹೋಗಿದ್ದೆವು. ಆ ಬಗ್ಗೆ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಚಂದನ್ ನನ್ನು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿದ್ದರು ಆದರೆ ಆ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ. ಆಟೋ ಸಂಖ್ಯೆ ನನಗೆ ಗೊತ್ತಿಲ್ಲ. ಘಟನೆ ಕಾಲಕ್ಕೆ ನಾನು ಚಂದನ್ ಇವರ ಮನೆಗೆ ಹೋಗಿಲ್ಲ. ಚಂದನ್ ನನ್ನು ಆ ಸ್ಥಳದಿಂದ ನೇರವಾಗಿ ಆಸ್ಪತ್ರೆಗೆ ಸೇರಿಸಿದ್ದರು. ನಾನು ಯಾವ ವಾಹನದಲ್ಲಿ ಹೋಗಿದ್ದೆ ಎಂದು ಹೇಳಿಕೆ ಕೊಟ್ಟಿಲ್ಲ. ಆ ದಿನ ನಾನು ಆರೋಪಿಯನ್ನು ನೋಡೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**